ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ
Chilume Circulated in and around 10 countries

ಸಂಪುಟ ೬, ಸಂಚಿಕೆ ೧, ಜೂನ್-೨೦೧೮

"ಆರು" ಹಿತವರು ನಮಗೆ !

ಹೊರನಾಡ ಚಿಲುಮೆಯ ೬ ನೇ ವರುಷ

ಕನ್ನಡ ...

ಕನ್ನಡ ...

ಕನ್ನಡ ...

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ
ಸಂಪಾದಕೀಯ ... ಪು. ೨

ಚಿಲುಮೆಯ ಒಳಗೆ
ಮಂಕುತಿಮ್ಮನ ಕಗ್ಗ ... ಪು. ೫

ಚಿಲುಮೆಯ ಒಳಗೆ
ರಾಂ ರಾಮ ... ಪು. ೬
ಕಥಾಚಿಲುಮೆ, ರೆಸಿಪಿ, ಕಾವ್ಯ ... ಪು. ೮/೧೦

ಚಿಲುಮೆಯ ಒಳಗೆ
ಪದಪುಂಜ ... ಪು. ೧೧

ಚಿಲುಮೆಯ ಒಳಗೆ
ನೀವು ಮಾಡಿ ... ಪು. ೧೫

ದಾನ ಸಾಹಿತ್ಯ – ಸಂಭೋಧನೆ
ಪು. ೧೩



"ತಾನು ಯಾರೆಂಬ ಅರಿವು ಮಾನವನಲ್ಲಿ ಮೂಡಲು ಶುರುಮಾಡಿದಾಗ, ಆ ತಿಳಿವಿನ ಬೆಳಕು ಅವನನ್ನು ಮುನ್ನಡೆಸುತ್ತದೆ." ಹೀಗೆಂದು ಅನೇಕಾನೇಕ ತತ್ತ್ವ ಸಿದ್ಧಾಂತಿಗಳಾದಿಯಾಗಿ ಬಹುತೇಕ ಎಲ್ಲರೂ "ಅರಿವಿನ" ಬಗ್ಗೆ ಒಂದಲ್ಲಾ ಒಂದು ಹೊತ್ತಿನಲ್ಲಿ ಮಾತನಾಡಿಯೇ ಇರುತ್ತಾರೆ. ಈ ಅರಿವಿನಿಂದ ನಮ್ಮ ನಮ್ಮ ಶಕ್ತಿ, ಪರಿಮಿತಿ ಇತ್ಯಾದಿಗಳನ್ನು ತಿಳಿದುಕೊಂಡು ನಮ್ಮ ನಮ್ಮ ಜೀವನವನ್ನು ಸದ್ಬಳಕೆ ಮಾಡಿಕೊಳ್ಳಬಹುದೆಂಬುದು ಸತ್ಯ.

ಈ ಅರಿವಿನ ಪರಿಣಾಮದಿಂದಾಗಿ ನಾವು ಮಾಡುವ ಕೆಲಸಗಳ ಬಗ್ಗೆ ನಮಗೇ ಗೊತ್ತಿಲ್ಲದಂತೆ ಅನಗತ್ಯ ಗರ್ವವೂ ಬರಬಹುದು. ಮೊದಮೊದಲು "ನೀನು ಇದನ್ನು ಚೆನಾಗಿ ಮಾಡ್ತೀಯಪ್ಪ" ಎನ್ನುವುದು ಪುರಸ್ಕಾರವಾಗಿ ಕಾಣಿಸಿ, ಕ್ರಮೇಣ, "ಓಹ್! ಇದನ್ನು ಇವರೇನು ಹೇಳುವುದು, ನನಗೆ ಗೊತ್ತಿಲ್ಲವೇ" ಎನ್ನುವ ಹಮ್ಮು ನಮ್ಮಲ್ಲಿ ಕಾಣಿಸಿಕೊಳ್ಳಬಹುದು. ಇಂತಹ ಹಮ್ಮೇನಾದರೂ ಬೆಳೆದುಬಿಟ್ಟರೆ, ಇತರರನ್ನು ದೂಷಿಸಿಕೊಂಡು, ತಾನು ಮಾಡಿದ್ದೇ ಸರಿ ಎನ್ನುವ ಮಟ್ಟಿಗೆ ಬಂದು ಬಿಡುತ್ತೇವೆ. ನಮ್ಮಲ್ಲಿ ಎಷ್ಟೇ ನೈಪುಣ್ಯತೆ ಇದ್ದರೂ, ಇತರರು ಮಾಡುವ ಕೆಲಸವನ್ನು ಹೊಗಳದಿದ್ದರೂ, ತೆಗಳದೆ ಒಂದು ಕ್ಷಣ ಅವರ ಕಾರ್ಯವನ್ನು ನೋಡಿ ಒಂದು ಚೆಂದದ ನಗೆಬೀರಿದರೂ ಸಾಕು. ಅದೆಷ್ಟು ಚೆನ್ನವಲ್ಲವೇ. ಇದರಿಂದ ಮಾಡಿದವರಿಗೆ ಪ್ರೋತ್ಸಾಹ ಸಿಗುವುದು ಸರಿ. ಆದರೆ ಅದಕ್ಕಿಂತಲೂ ಶ್ರೇಷ್ಠ ಭಾವನೆ ನಮಗೇ ಸಿಗುತ್ತದೆ. ಬೇಡದ ಮತ್ಸರ ದೂರವಾಗುತ್ತದೆ. ನಿಜ ಹೇಳಬೇಕೆಂದಲ್ಲಿ ಪ್ರೋತ್ಸಾಹಗೊಂಡವರ ಕಣ್ಣುಗಳಲ್ಲಿ ನಾವುಗಳು ಬಹಳ ಎತ್ತರಕ್ಕೆ ಏರುತ್ತೇವೆ. ಈ ಕೆಳಗಿನ ಶ್ರೇಷ್ಠ ಕವಿಮನದ ಪದ್ಯವನ್ನು ಗಮನಿಸಿ.

ಸಾಗರದ ಸಿಂಧು, ಮಳೆಯ ಹನಿಯೊಂದ ಕಂಡು ಮರುಳಾದಂತೇ..,
ಕಾನನದ ಕಂಪು, ಬೇಲಿ ಹೂವೊಂದರ ಪರಿಮಳಕೆ ತಲೆದೂಗುವಂತೇ..,
ನೇಸರನ ಸೊಬಗು, ಕುಂಚವೊಂದರ ಎಳೆದಾಟಕೆ ಬೆರಗಾಗುವಂತೇ...,
ವಾಗ್ದೇವಿಯೇ ತಾನು ಹಸುಗೂಸ ತೊದಲ್ನುಡಿಗೆ ಮನಸೋಲುವಂತೇ...,
ಹಿರಿತನಕೆ ಬೇಕಾದ್ದು ಆಕಾರ ತಾನಲ್ಲ....,
ಹಿರಿತನಕೆ ಬೇಕಾದ್ದು ಆಕಾರ ತಾನಲ್ಲ
ತಾನ್ಯಾರು ಎಂಬ ಅರಿವಿರದ ಗುಣವಂತೆ,
ಅರಿವಿರದ ಗುಣವಂತೇ.

"ತಾನ್ಯಾರೆಂಬ ಅರಿವು ಮರೆತರೆ ಮಾತ್ರ ಹಿರಿತನ ಬರುವುದು" ಎಂದು ವಾಕ್ಯಾರ್ಥವಾಗಿ ತೋರಿ ಗೊಂದಲ ಉಂಟಾದರೂ, ಪದ್ಯದಲ್ಲಿರುವ ಉಪಮೆಗಳನ್ನು ಗಮನಿಸಿದರೆ, ಪದ್ಯದ ಅಮೂಲ್ಯ ಅರ್ಥವೂ ನಮಗೆ ಗೋಚರಿಸುತ್ತದೆ. "ವಾಗ್ದೇವಿಯೇ ತಾನು ಹಸುಗೂಸ ತೊದಲ್ನುಡಿಗೆ ಮನಸೋಲುವಂತೆ" - ಇಲ್ಲಿ ಸರಸ್ವತಿಯು ತಾನು ವಿದ್ಯೆಯ ಅಧಿದೇವತೆ ಎಂದು ಜಂಭ ಪಟ್ಟರೆ, ಪುಟ್ಟ ಮಕ್ಕಳ ತೊದಲ್ನುಡಿ ಸವಿಯುವ ಸೌಭಾಗ್ಯವನ್ನೇ ಕಳೆದುಕೊಳ್ಳುತ್ತಾಳೆ. ಆದರೆ ಹಾಗೆ ಮಾಡದೆ "ಆಹಾ! ಎಷ್ಟು ಸೊಗಸಪ್ಪ" ಎಂದು ತಲೆದೂಗಿದರೆ ಆಕೆ ಹಿರಿಯಳಾಗುತ್ತಾಳೆ. ಅರ್ಥಾತ್, ನಾವ್ಯಾರೆಂದು ತಿಳಿದಿದ್ದರೂ, ಚಿಕ್ಕಪುಟ್ಟದ್ದನ್ನು ಅಲ್ಲಗಳೆಯದೇ ಅದನ್ನೂ ಅಸ್ವಾದಿಸಿದರೆ ಜೀವನ ಹೆಚ್ಚು ಸುಮಧುರವಾಗಿರುತ್ತದೆ.

ಕನ್ನಡವನ್ನು ಅನೇಕ ಜನರು ಈಗಲೂ ಕಟ್ಟಿ ಬೆಳಸುತ್ತಿದ್ದಾರೆ. ಕನ್ನಡದ ಬೆಳವಣಿಗೆಯನ್ನು ಕೇವಲ ಸಂಘ ಸಂಸ್ಥೆಗಳು ಮಾಡಿದರೆ ಮಾತ್ರ ಪ್ರೋತ್ಸಾಹಿಸೋಣ, ನಮಗೇನು ಲಾಭವಿದೆಯೋ, ಅಂತಹವುದರಲ್ಲಿ ಮಾತ್ರ ಭಾಗವಹಿಸೋಣವೆನ್ನದೇ, ಕನ್ನಡದ ಕಂದಮ್ಮಗಳು ಕನ್ನಡದ ತೊದಲ್ನುಡಿಗಳನ್ನು ಎಲ್ಲೇ ನುಡಿದರೂ, ಅದನ್ನು ಕೇಳಿ ಆನಂದಿಸೋಣ. ಕನ್ನಡವನ್ನು ಬೆಳೆಸುತ್ತ ಹಿರಿಯರಾಗೋಣ. ಆರು ಹಿತವರು ನಮಗೆ ಎಂದರೆ ಕನ್ನಡವೆನ್ನೋಣ ▪

ದೋಣಿ ವಿಹಾರ

ಕನಕಾಪುರ ನಾರಾಯಣ

ಸಿಡ್ನಿ ಕನ್ನಡ ಶಾಲೆಯ ಸಹಾಯಕ್ಕೆಂದು ಆಯೋಜಿಸಿದ್ದ ದೋಣಿ ವಿಹಾರ ಸಿಡ್ನಿ ವಿವಿಡ್ ಲೈಟ್ಸ್ ಉತ್ಸವದ ಕಡೆಯ ದಿನವಾದ ಜೂನ್ ೧೬ ರಂದು ಡಾಲಿಂಗ್ ಹಾರ್ಬರ್ ನ ಕಿಂಗ್ ರಸ್ತೆ ವಾರ್ಫ್ ನಿಂದ ಹೊರಟು ನಾಲ್ಕು ಘಂಟೆಗಳ ಕಾಲ ಮೋಜು-ಮಸ್ತಿನಿಂದ ಕೂಡಿದ ಮರೆಯಲಾಗದ ಸಂಜೆಯಾ ಒಂದು ಪುಟ್ಟ ವರದಿ ಇಲ್ಲಿದೆ. ಚಳಿಗಾಲದ ಸಂಜೆಯ ವಿಪರೀತ ತಣ್ಣನೆಯ ವಾತಾವರಣ, ಡಾರ್ಲಿಂಗ್ ಹಾರ್ಬರ್ ಕಣ್ ಕೋರೈಸುವಂತೆ ಎಲ್ಲೆಲ್ಲೂ ಮಿನುಗುತ್ತಿರುವ ವಿವಿಡ್ ಲೈಟ್ಸ್, ಬಣ್ಣ ಬಣ್ಣದ ದೀಪಾಲಂಕೃತದಿಂದ ಕಂಗೊಳಿಸುತ್ತಿದ್ದ ದೊಡ್ಡ ದೋಣಿಗಳು ತೀರದಲ್ಲೇ ಹಾದುಹೋಗುವ ದೃಶ್ಯ, ಎಲ್ಲವೂ ಮನಸೂರೆ ಮಾಡುವಂತಿತ್ತು. ಇನ್ನೂರೈವತ್ತಕ್ಕೂ ಹೆಚ್ಚು ಕನ್ನಡಿಗರು ಸಾಲಾಗಿ ನಿಂತು ದೋಣಿ ಬಂದ ಕೂಡಲೇ ಖುಷಿಯಿಂದ ಗಲಗಲ ಎಂದು ಮಾತನಾಡುತ್ತಾ ಒಳಗೆ ನಡೆದು ಬಂದರು. ಎರಡು ಮಾಳಿಗೆ ಇದ್ದ ದೋಣಿಯಲ್ಲಿ ಅವರವರ ಸ್ನೇಹಿತರ ಜೊತೆ ಗುಂಪಾಗಿ ಕುಳಿತರು. ಛಳಿಗೆ ಹೇಳಿ ಮಾಡಿಸಿದ ಹಾಗೆ ಮೊದಲು ಬೆಣ್ಣೆ ಮುರುಕು, ಬಾಳೆ ಚಿಪ್ಸ್ ಚೌಚೌ ಹಂಚಲಾಯಿತು. ಅದು ನಿಮಿಷದಲ್ಲಿ ಖಾಲಿಯಾದದ್ದು ಆಶ್ಚರ್ಯವಾಯಿತು.

ಮನರಂಜನೆಗಾಗಿ ಹಾಡುಗಾರಿಕೆ ಸಂಗೀತ ಮುಂದೆ ೯೦ ನಿಮಿಷ ಎಲ್ಲರ ಮನ ಸೆಳೆಯಿತು. ಸೂರಜ್ ಪಿಟೀಲು ಅದ್ಭುತವಾಗಿ ನುಡಿಸಿದರೆ, ಗಿಟಾರ್ ಸಹಿತ ಹಾಡಿದ ಕಾರ್ತಿಕ್ ಹಾಗೂ ಕ್ಯಾರೆಯೋಕೆಯೊಂದಿಗೆ ಹಾಡಿದ ದೀಪಕ್ ಸಹ ಎಲ್ಲರ ಶಿಳ್ಳೆ ಚಪ್ಪಾಳೆ ಗಿಟ್ಟಿಸಿದರು.

ಬಿಸಿಬಿಸಿಯಾಗಿ ಬಿಸಿಬೇಳೆಭಾತ್ ರುಚಿಯಾದ ಮೊಸರನ್ನ ರಾಯತ ಲಂಚ್ ಬಾಕ್ಸ್ ನಲ್ಲಿ ಹಂಚಿದ್ದು ತೃಪ್ತಿ ತಂದಿತು. ತದನಂತರ ಬಹಳ ಆಕರ್ಷಣೆ ಪಡೆದದ್ದು ಟ್ರಿವಿಯಾ ಕ್ವಿಝ್. ಮಕ್ಕಳಂತೂ ಬಹಳ ಖುಷಿಯಿಂದ ಕೂಗಡುತ್ತಾ ಕೈಮೇಲೆತ್ತುತ್ತಾ ಭಾಗವಹಿಸಿದ್ದು ನೋಡಲು ಚೆಂದವಿತ್ತು. ಗೆದ್ದವರಿಗೆ ಪುಟ್ಟ ಬಹುಮಾನವನ್ನೂ ಕೈಗಿಡಲಾಯಿತು. ಅಷ್ಟರಲ್ಲಿ ನಾಲ್ಕು ತಾಸು ಕಳೆದದ್ದೇ ತಿಳಿಯಲಿಲ್ಲ. ಉಳಿದ ಹತ್ತಿಪ್ಪತ್ತು ನಿಮಿಷ ಡಿಸ್ಕೊ ದೀಪಗಳನ್ನು ಹಚ್ಚಿ ಕುಣಿತಕ್ಕೆ ತಕ್ಕ ಮ್ಯೂಸಿಕ್ ಹಾಕಿ ಮಕ್ಕಳು ದೊಡ್ಡವರು ಎಲ್ಲರೂ ಡ್ಯಾನ್ಸ್ ಮಾಡಿದ್ದು ನೋಡಲು ಮಜಾ ಬಂತು. ರಾತ್ರಿ ಹತ್ತೂವರೆ ಆದರೂ ದೋಣಿ ಹತ್ತಿದ ಸ್ಥಳದಲ್ಲಿ ಅದೇ ಸಂಭ್ರಮ ಜನಜಂಗುಳಿ ವಿವಿಡ್ ಫೆಸ್ಟಿವಲ್ ಕಡೆದಿನ ಅನ್ನುವಸೂಚನೆ ನೀಡಿತ್ತು. ನಮ್ಮವರೆಲ್ಲಾ ಸಂತೋಷದಿಂದ ಮನೆ ಸೇರಿ ಒಳ್ಳೆಯ ಅಭಿಪ್ರಾಯ ಅನಿಸಿಕೆಗಳನ್ನು ಹಂಚಿಕೊಂಡರು.▪

ವಿವಿಡ್ - ದೋಣಿ ವಿಹಾರದ ಮತ್ತಷ್ಟು ಚಿತ್ರಗಳು





ಕಂಡ ದೈವಕ್ಕೆಲ್ಲ ಕೈಯ ಮುಗಿದೇನಹುದು?
ಚಂಡಚತುರೋಪಾಯದಿಂದಲೇನಹುದು ?
ತಂಡುಲದ ಹಿಡಿಯೊಂದು ತುಂಡುಬಟ್ಟೆಯದೊಂದು
ಅಂಡಲೆತವಿದಕೇನೋ? – ಮಂಕುತಿಮ್ಮ

ಚಂಡ= ಉಗ್ರ, ಚತುರೋಪಾಯ = ನಾಲ್ಕು ವಿಧವಾದ ಉಪಾಯಗಳು, ಮುಗಿದೇನಹುದು = ಮುಗಿದು ಏನು ಅಹುದು= ಮುಗಿದರೆ ಏನಾಗುತ್ತದೆ. ತಂಡುಲ=ಅಕ್ಕಿ, ಅಂಡಲೆತ= ಸುಮ್ಮನೆ ಸುತ್ತಾಟ.

ಅಂದಿನ ಮತ್ತು ಇಂದಿನ ವಾಸ್ತವಿಕ ಚಿತ್ರಣವನ್ನು ನಮಗೆ ಗುಂಡಪ್ಪನವರು ಕೊಟ್ಟಿದ್ದಾರೆ ಈ ಕಗ್ಗದಲ್ಲಿ. ನಮ್ಮಲ್ಲಿ ಅನೇಕ ದೇವರುಗಳು. ಒಂದುಕಡೆ ತಿರುಪತಿ ತಿಮ್ಮಪ್ಪನಾದರೆ, ಇನ್ನೊಂದು ಕಡೆ, ಬದರಿಯ ಬದರೀನಾಥ, ಒಂದುಕಡೆ ಮಧುರೆಯ ಮೀನಾಕ್ಷಿಯಾದರೆ, ಇನ್ನೊಂದುಕಡೆ ಕಾಶಿಯ ವಿಶಾಲಾಕ್ಷಿ, ಒಂದುಕಡೆ ಪೂರಿಯ ಜಗನ್ನಾಥನಾದರೆ ಇನ್ನೊಂದುಕಡೆ ತಿರುವನಂತಪುರದ ಅನಂತಪದ್ಮನಾಭ, ಒಂದುಕಡೆ ವಿನಾಯಕನಾದರೆ, ಇನ್ನೊಂದುಕಡೆ ಷಣ್ಮುಖ, ಹೀಗೇ ಬರೆಯುತ್ತಹೋದರೆ ಪಟ್ಟಿ ಬಹಳ ಉದ್ದ ಆದೀತು. ದೇಶ ಕಾಲ ಸಂಧರ್ಭಕ್ಕನುಗುಣವಾಗಿ ನಮಗೆ ನಾವು ಪೂಜಿಸುವ ದೇವತೆಗಳು ಬದಲಾಗುತ್ತ ಹೋಗುತ್ತಾರೆ. ಇದನ್ನೇ ಗುಂಡಪ್ಪನವರು "ಕಂಡ ದೈವಕ್ಕೆಲ್ಲ" ಎಂದಿರಬೇಕು.

ಆದರೆ ಇದು ಸರಿಯೇ ಅಲ್ಲವೇ ಎಂದು ಸ್ವಲ್ಪ ವಿಶ್ಲೇಷಿಸೋಣವೇ? ಭಾರತೀಯರಾದ ನಮಗೆ ಎಲ್ಲವೂ ದೈವವೇ? ಗಿಡ ಮರ ಬಳ್ಳಿ ನದಿ ಗುಡ್ಡ ಬೆಟ್ಟ, ಆಕಾಶ ಸೂರ್ಯ ಚಂದ್ರ ಎಲ್ಲ ಗ್ರಹಗಳು, ಪಕ್ಷಿ ಮೀನು ಪ್ರಾಣಿಗಳು ಎಲ್ಲವೂ ದೇವರೇ. ಅಷ್ಟೇ ಅಲ್ಲ ಎಲ್ಲದರಲ್ಲೂ ದೈವವನ್ನು ಕಾಣುವ ಸಂಸ್ಕೃತಿ ನಮ್ಮದು. ಅವುಗಳನ್ನೆಲ್ಲ ಕಾಪಾಡುವ ಕಾರಣದಿಂದ ಅವುಗಳಿಗೆಲ್ಲ ದೈವತ್ವವನ್ನು ಆರೋಪಿಸಿದ್ದಾರೆ ನಮ್ಮ ಪೂರ್ವಜರು. ಒಂದು ರೀತಿಯಲ್ಲಿ ಇದು ಒಳ್ಳೆಯದೇ ಅಲ್ಲವೇ ವಾಚಕರೆ? ಆದರೆ ವ್ಯಕ್ತಿ ಆಂತರ್ಯದಲ್ಲಿ ಬೆಳೆಯುತ್ತಾ ಹೋದಂತೆಲ್ಲ ಅನೇಕದಿಂದ ಏಕಕ್ಕೆ ಬರುವುದೇ ಅಧ್ಯಾತ್ಮಸಾಧನೆಯ ಗುರಿ. ಆಕಾರದಿಂದ ನಿರಾಕಾರಕ್ಕೆ ಬರುವುದೇ ಎಲ್ಲ ಸಾಧನೆಯ ಫಲ.

ಆದರೆ ನಾವು ಏಕೆ ಈ ದೈವಕ್ಕೆ ಕೈ ಮುಗಿಯುತ್ತೇವೆ? ಇದಕ್ಕೆ ನನ್ನ ಅರಿವಿನ ಪರಿಮಿತಿಯಲ್ಲಿ ವಿವರಿಸುತ್ತೇನೆ. ನಮಗೆ ಆಸೆಗಳುಂಟು. ಆಸೆಗಳು ನಾವು ಈ ಬದುಕಿಗೆ ಅಂಟಿಕೊಂಡಿರುವುದರಿಂದ ಉಂಟು. ಈ ಆಸೆಯ ಪಕ್ಕ ಪಕ್ಕದಲ್ಲೇ ಒಂದು ಭಯವೂ ಉಂಟು. ಒಂದು ತನ್ನಲ್ಲಿರುವ ವಸ್ತು, ವಿಷಯ ಅಥವಾ ವ್ಯಕ್ತಿ ಯನ್ನು ಕಳೆದುಕೊಳ್ಳುವ ಭಯ. ಎರಡು, ತಾನು ಆಸೆ ಪಟ್ಟ ವಸ್ತು, ವ್ಯಕ್ತಿ, ವಿಷಯಗಳು ಸಿಗದೆಹೋಗುವ ಭಯ.

ಆದರೆ ಈ ಭಯ ಸಹಜವಾದದ್ದೇ. ಮನುಷ್ಯನಿಗೆ ತನ್ನ ಜೀವನದಲ್ಲಿ ತನಗೆ ಸಂಬಂಧಿಸಿದ ಎಲ್ಲ ವ್ಯಕ್ತಿ, ವಿಷಯ ಮತ್ತು ವಸ್ತುವಿನ ಮೇಲೆ ಮಮಕಾರವಿರುತ್ತದೆ. ಈ ಮಮಕಾರವೇ ಈ ಭಯಕ್ಕೆ ಕಾರಣ. ಕಳೆದು ಹೋಗುವುದು ಏಕೆ? ಬಯಸಿದ್ದು ಆಗದೆ ಹೋಗುವುದು ಏಕೆ? ಎಂದು ಖಚಿತವಾಗಿ ನಮಗೆ ಅರಿಯದಾದಾಗ ಮತ್ತು ಸಂಶಯಗಳಿದ್ದಾಗ, ನಮಗರಿಯದ ನಮ್ಮನ್ನು ಕಾಯುವ ಯಾವುದೋ ಶಕ್ತಿಗೆ ನಾವು ಕೈಮುಗಿದು, ಬೇಡುವುದೋ ಅಥವಾ ಶರಣಾಗುವುದೋ ಮಾಡುತ್ತೇವೆ. ಅದನ್ನೇ ಗುಂಡಪ್ಪನವರು " ಆ ವಿಚಿತ್ರಕೆ ಶರಣಾಗೋ " ಎನ್ನುತ್ತಾರೆ.

ಭಾರತೀಯರಾದ ನಮಗೆ ಎಲ್ಲವೂ ದೇವರೇ ಆದ್ದರಿಂದ, ಇಷ್ಟೊಂದು ಬಗೆಬಗೆಯ ದೇವರುಗಳು ನಮ್ಮಲ್ಲಿ, ಹಣಕ್ಕೊಬ್ಬ, ಗುಣಕ್ಕೊಬ್ಬ, ವಿದ್ಯೆಗೊಬ್ಬ, ಆರೋಗ್ಯಕ್ಕೊಬ್ಬ, ಪಾಪನಾಶನಕ್ಕೊಬ್ಬ, ಪರಮಾರ್ಗಕ್ಕೊಬ್ಬ. ಮತ್ತು ಈ ದೇವತೆಗಳನ್ನು ಒಲಿಸಿಕೊಳ್ಳಲು ಹಲವಾರು ವಿಧಾನಗಳು. ದರ್ಶನ, ಅರ್ಚನೆ, ಅಭಿಷೇಕ, ದಾನ,ಧ್ಯಾನ, ಭಜನೆ, ಆನ್ನ ಸಂತರ್ಪಣೆ, ಸಮಾರಾಧನೆ, ಪರೋಪಕಾರದ ಕೆಲಸಗಳು, ಹೋಮ, ಹವನ, ಯಜ್ಞ, ಯಾಗಾದಿಗಳು, ಹೀಗೆ ನಮಗೆ ತೋಚಿದ್ದು, ಮತ್ತು ಪರರಿಂದ ಸೂಚಿಸಲ್ಪಟ್ಟ, ಸಾಮ, ದಾನ , ಬೇಧ, ದಂಡದಂತ ತುರೋಪಾಯಗಳನ್ನೂ ಉಪಯೋಗಿಸಿ, ನಮ್ಮ ಕಾರ್ಯ ಸಾಧನೆಗೆ ಆ ದೇವರನ್ನು ಸದಾಕಾಲ ಒಲಿಸಿಕೊಳ್ಳಲು ಪ್ರಯತ್ನಿಸುತ್ತೇವೆ. ಇದು ಒಂದು ಮಾನಸಿಕ ಸ್ವಯಂ ಚಿಕಿತ್ಸೆ. ನಮ್ಮ ಮನಸ್ಸುಗಳಲ್ಲಿ ಉದ್ಭವಿಸುವ ಹಲವಾರು ಪ್ರಶ್ನೆ ಮತ್ತು ಸಂದೇಹಗಳಿಗೆ ನಾವೇ ಕಂಡುಕೊಳ್ಳುವ ಸಮಾದಾನ.

ಇದು ಅಧ್ಯಾತ್ಮ ಪ್ರಯಾಣದ ಒಂದು ಸ್ತರ. ಅವರವರ ಮಟ್ಟಿಗೆ ಸರಿ. ಆದರೆ ಗುಂಡಪ್ಪನವರು " ತಂಡುಲದ ಹಿಡಿಯೊಂದು ತುಂಡುಬಟ್ಟೆಯದೊಂದು" ಒಂದು ಹಿಡಿ ಅಕ್ಕಿಗಾಗಿ, ಹೊಟ್ಟೆ ತುಂಬಿಸಿಕೊಳ್ಳಲು, ಗೇಣುದ್ದ ಬಟ್ಟೆಗಾಗಿ, ಮೈಮುಚ್ಚಲು ಮನುಷ್ಯ ಇಷ್ಟೆಲ್ಲಾ ಮಾಡಬೇಕೆ, ಎಂಬ ಭಾವದಲ್ಲಿ ಒಂದು ವೈರಾಗ್ಯದ ವಿಷಯವನ್ನು ಪ್ರಸ್ತಾಪ ಮಾಡುತ್ತಾರೆ. ಆದರೆ ವೈರಾಗ್ಯವು ಅನುಭವದಿಂದ ಮಾತ್ರ ಬರಲು ಸಾಧ್ಯ. ಅಂತಹ ಅನುಭವನ್ನು ಕೊಡುವುದೇ ಜೀವನ. ▪

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ಸಿದ್ದು ಮೇಷ್ಟ್ರ ವ್ಯಾಕರಣ ಪಾಠ

ಸಿದ್ದಣ್ಣ ಮೇಷ್ಟ್ರು ಅಂದ್ರೆ ವ್ಯಾಕರಣ. ವ್ಯಾಕರಣ ಅಂದ್ರೆ ಸಿದ್ದು ಮೇಷ್ಟ್ರು. ಅವರ ಮಾತು ಮಾತಿನಲ್ಲೂ ವ್ಯಾ ಎನ್ನುವಂತಹದ್ದು, ರಣಕ್ಕೆ ಪ್ರಚೋದನೆ ಕೊಡುವಂತಹದ್ದು ಇರುತ್ತಿದ್ದದ್ದು ಕೇವಲ ಬೈ-ಪ್ರಾಡಕ್ಟ್ ಅಷ್ಟೆ.

"ಎಲವೋ ರಾಮ್ಯ, ಸಂಧಿ ಅಂದ್ರೆ ಗೊತ್ತೇನೋ ನಿನಗೆ?" ಕೇಳಿದರು ಅಂದೊಮ್ಮೆ.

"ಗೊತ್ತು ಸರ್. ನನ್ನ ಪಕ್ಕಾನೇ ಕೂತಿದ್ದಾಳೆ. ಕೋಡುಬಳೆ ಇಷ್ಟ ಅವಳಿಗೆ" ಎಂದೆ ಸಂಧಿ ಉರುಫ್ ಸಂಧ್ಯಳನ್ನೇ ನೋಡುತ್ತಾ.

"ಮೂರ್ಖ. ಸಂಧಿ ಅಂದ್ರೆ ಅಕ್ಷರ ಅಕ್ಷರಗಳು ಸೇರಿದಾಗ ಆಗೋದು ಕಣೋ" ಎಂದರು ಮೇಷ್ಟ್ರು.

"ಅಕ್ಷರ ಅಕ್ಷರಗಳನ್ನು ಸೇರಿಸಿ ಬರೆದಾಗ ಅದನ್ನು ಚಿತ್ತು ಅಂತ ಕರೆದಿರಲ್ಲ ಮೇಷ್ಟ್ರೇ..."

ಬಾಲ್ಯದಲ್ಲೇ ನುರಿತ ವೈದ್ಯನ ಹ್ಯಾಂಡ್ ರೈಟಿಂಗ್ ಹೊಂದಿದ್ದ ತಿಮ್ಮೇಶ ಕೇಳಿದ.

"ಸಾರ್, ಪದಪದಗಳು ಸೇರಿದಾಗ ಅಲ್ವಾ?" ಅಯ್ಯರ್ ಮಗ ವೈಯ್ಯರ್ (ವೆಂಕಟೇಶ ಅಯ್ಯರ್. ಹ್ರಸ್ವ ಹೆಸರಾಗಿ ವೈಯ್ಯರ್)

"ಇಲ್ಲಿ ನಾನು ಮೇಷ್ಟ್ರು. ನಾನು ಹೇಳಿದ್ದೇ ಸಂಧಿ. ಸಂಧಿಗಳಲ್ಲಿ ಮೂರು ವಿಧ - ಆಗಮ, ಆದೇಶ, ಲೋಪ ಸಂಧಿಗಳು. ಯಾರಾದ್ರೂ ಹೇಳ್ತೀರಾ ಇದೇನೂಂತ...?"

ಅಂದು ಯಾರು ಏನು ಉತ್ತರ ಕೊಟ್ಟರೋ, ಬಿಟ್ಟರೋ ತಿಳಿಯದು. ಇಂದು ಆ ಮೇಷ್ಟ್ರಿಗೆ ವಿಧಾನಸೌಧದಲ್ಲಿ ವ್ಯಾಕರಣದ ಪಾಠ ಮಾಡುವ ಭಾಗ್ಯ ದೊರಕಿತು. ಮತ್ತೆ ಆಗಮ, ಆದೇಶ, ಲೋಪ ಸಂಧಿಗಳು ಎಂದರೇನು ಎಂದು ನೆರೆದಿದ್ದ ಪತ್ರಕರ್ತರು, ಮಂತ್ರಿಗಳು, ವಂದಿಮಾಗಧರನ್ನು ಕೇಳಿದರು.

"ಆ - ಅಲ್ಪಸಂಖ್ಯಾತರು; ಗ - ಗರ್ವಿಷ್ಠರು; ಮ - ಮತಮತಿಗಳು ಒಟ್ಟಿಗೆ ಸೇರುವ ಸಂದರ್ಭವನ್ನೇ ಆಗಮ ಸಂಧಿ ಎನ್ನುತ್ತೇವೆ" ಎಂದರು ವಿಪಕ್ಷದ ಧುರೀಣರು.

"ಅದಕ್ಕೇ ನೀವು ಆಪೊಸಿಶನ್‌ನಲ್ಲಿ, ಆ ಪೊಸಿಶನ್‌ನಲ್ಲಿ ಇರೋದು. ಆ ಅಂದರೆ ಅಲ್ಪಸಂಖ್ಯಾತರು ಅನ್ನೋದು ತಪ್ಪು; ಅ+ಅ = ಆ; ಆ ಅಕ್ಷರವೇ ಸವರ್ಣದೀರ್ಘ ಸಂಧಿ. ಆದ್ದರಿಂದ ಆ ಎಂದರೆ ಅ - ಅಲ್ಪಸಂಖ್ಯಾತರು; ಅ - ಅಲ್ಪಮತಿಗಳು ಅಂತ ತಿದ್ದಿಕೊಳ್ಳಿ. ನಿಮಗೂ ಹೊಂದತ್ತೆ. ಯಾರಾದರೂ ಆದೇಶ ಸಂಧಿ ಅಂದರೆ ಏನೂಂತ ಹೇಳ್ತೀರಾ?"

"ಭೂಪಟ್ಟಾಗೇ ಐತಲ್ಲ ಸಸಿವ್ರೆ; ವಿಂಡಿಯಾಗೂ ಸೀಲಂಕಾಗೂ ಮಧ್ಯ ಜಾಗ ಬಿಟ್ಟವ್ರಲ್ಲಾ ಅದೇ ಸಂಧಿ ಅಲ್ಲವ್ರಾ?" ಕೇಳಿದರು ಪಠ್ಯಪುಸ್ತಕ ಸಚಿವರು.

"ಹ್ಹ! ಈ ದೇಶದಲ್ಲಿ ಇರುವ ಎಲ್ಲ ದುಡ್ಡನ್ನು ಬಾಚಿಕೊಂಡು ಬ್ರಿಟನ್ನಿಗೋ, ಬೈಝಿಲ್ಲಿಗೋ ಹಾರುವುದೇ ಆದೇಶ ಸಂಧಿ. ನಮ್ಮದು ಈ ದೇಶ. ಮಿಕ್ಕೆಲ್ಲವೂ ಆ ದೇಶ. ಆ ದೇಶಕ್ಕೆ ಹೋಗುವ ಸುಸಂಧಿಯೇ ಆದೇಶ ಸಂಧಿ. ಇದರಲ್ಲಿ ಒಂದು ಹಡ್ವಾಂಟೇಜೂ ಇದೆ. ಇಲ್ಲಿನ ಯಾವುದೇ ಕೋರ್ಟುಗಳ ಆದೇಶ ಆ ದೇಶದಲ್ಲಿ ನಡೆಯೊಲ್ಲ. ಆದ್ದರಿಂದ ಆದೇಶ ಸಂಧಿಯೇ ಸೂಪರ್ ಸಂಧಿ" ಪರಾರಿ ಇಲಾಖೆಯ ಸಚಿವರು ನುಡಿದರು.

"ಲೋಪ ಸಂಧಿ ಅಂದ್ರೆ?"

"ಲೋಕಾಯುಕ್ತದವರಿಂದ ಹಿಡಿಯಲ್ಪಟ್ಟು, ಪರಪ್ಪನ ಅಗ್ರಹಾರದವರೆಗೆ ಹೋಗಬೇಕಾದರೆ ದಾಟಬೇಕಾದ ವಿವಿಧ ಸಂಧಿಗಳೇ ಲೋಪ ಸಂಧಿಗಳು" ಎಂದರು ಗೃಹಸಚಿವರು.

"ಯಾರೋ ಹೇಳಿದ್ದನಾದ್ರೂ ಸರಿಯಾಗಿ ತಿಳ್ಕೊಳ್ರಿ; ಎಲ್ಲ ಸಂಧಿಗಳಿಗೂ ಕಾವೇರಿ ನದೀನೇ ಸೂಕ್ತ ಉದಾಹರಣೆ. ಕಾವೇರಿ ಸುಪ್ರೀಂ ಕೋರ್ಟ್‌ಗೆ ಆದೇಶ ಸಂಧಿ, ತಮಿಳುನಾಡಿಗೆ ಆಗಮ ಸಂಧಿ, ಕರ್ನಾಟಕಕ್ಕೆ ಲೋಪ ಸಂಧಿ" ನೀರಾ-ವರಿ ಸಚಿವರು ದನಿಯೇರಿಸಿದರು.

ಮುಂದಿನ ಪುಟ ನೋಡಿ ...

“ಸುವರ್ಣ ದೀರ್ಘ ಸಂಧಿ ಗೊತ್ತಾ ನಿಮಗೆ?” ವಿರೋಧಪಕ್ಷದಿಂದ ದನಿಯೊಂದು ತೂರಿಬಂತು.

“ಅಕ್ಷಯ ತದಿಗೆ ದಿವಸ ಇರುವೆ ತೂರಕ್ಕೂ ಸಂದಿ ಇಲ್ಲದ ತರಹ ಕ್ಯೂನಲ್ಲಿ ಜನ ಚೆನ್ನ ಕೊಂಡ್ಕೊಳ್ತಾರಲ್ಲಾ, ಆ ಕ್ಯೂನೇ ಸುವರ್ಣ ದೀರ್ಘ ಸಂಧಿ” ಎಂದಿತೊಂದು ದಳದ ಎಳಸು.... ಕ್ಷಮಿಸಿ... ಎಸಳು.

“ಅಲ್ಲ. ಒಂದೇ ಜಾತಿಯವರು ಇರುವಂತಹ ದೊಡ್ಡ ವಠಾರವೇ ಸ-ವರ್ಣ ದೀರ್ಘ ಸಂಧಿ; ಕಮ್ಯುನಿಟಿ ಫ್ಲಾಟ್‌ಗಳನ್ನೂ ಸ-ವರ್ಣ ದೀರ್ಘ ಸಂಧಿ ಎನ್ನಬಹುದು” ಎಂದರು ನರಕಾಭಿವೃದ್ಧಿ ಸಚಿವರು.

“ಕರ್ಮಪದ ಎಂದರೇನು?” ಎಂದನೊಬ್ಬ ಪತ್ರಕರ್ತ.

“ಆಚೆ ಕಳಿಸ್ರಿ ಅವನನ್ನ. ಉಡುಪಿ ಮಠಕ್ಕೆ ನಾನು ಹೋಗಲಿಲ್ಲ ಅಂತ ನನ್ನನ್ನ ಛೇಡಿಸಕ್ಕೆ ಆ ಪ್ರಶ್ನೆ ಕೇಳಿರೋದು. ಕರ್ಮ ಕಾಡಿದರೆ ನಾನು ಅನುಭವಿಸ್ತೀನಿ, ನಿಮಗೇನು? ಬಂದ್ಬಿಟ್ಟ ಕರ್ಮದ ಬಗ್ಗೆ ಪದ ಹಾಡಕ್ಕೆ” ಫರ್ಜಿಸಿದರೊಬ್ಬ ಸಚಿವರು.

“ಗುಣವಾಚಕ ಎಂದರೆ?”

“ಹೂಬ್ಲಾಟ್ ವಾಚ್ ವಿಷಯ ಬಿಡೀಪ್ಪಾ.... ಆ ವಾಚಿನ ಗುಣದ ಬಗ್ಗೆ ಮಾತನಾಡಿದ್ದೇ ಗುಣ-ವಾಚಕ ಅಂತ ಎಲ್ಲರಿಗೂ ಗೊತ್ತಿರೋದೇ...” ಕೈ ಕೈ ಹಿಸುಕಿಕೊಂಡರೊಬ್ಬ ತಂತ್ರಿ.

“ಅದಲ್ಲ ಸಾರ್, ಗುಣವಾಚಕ ಎಂದರೆ ಗುಣಕ್ಕೆ ಸಂಬಂಧ ಪಟ್ಟದ್ದೂ....” ವಿವರಿಸಲು ಮುಂದಾದರು ಸಿದ್ದು ಮಾಸ್ಟರ್.

“ಇಲ್ಲಿ ಕುಳಿತ ಯಾರಿಗೂ ಇಲ್ಲವಾದ ಗುಣದ ಬಗ್ಗೆ ಚರ್ಚಿಸುವುದು ವ್ಯರ್ಥ. ಒಣಮಾತು ಸಾಕು. ದ ಹೌಸ್ ಈಸ್ ಅಡ್ಜರ್ನ್ಡ್” ಎಂದರು ಇಸ್ಪೀಕರ್.

ವ್ಯಾಕರಣ ಸಭೆ ಬರಖಾಸ್ತಾಯಿತು. ▪

ಚಿತ್ರ ಕಾವ್ಯ

ಗಗನವು yellow

ಭೂಮಿಯು yellow

ಭೂರಮೆ ಸೊಬಗಿಗೆ

ಕೊನೆಯದು ಎಲ್ಲೋ !

■ ನಾಗಶ್ಶೆಲ ಕುಮಾರ್

ನಮ್ಮ ಕನ್ನಡ ಶಾಲೆನಲ್ಲಿ ಮಕ್ಕಳಿಗೆ ಪುಸ್ತಕದ ಪಾಠ ಹೇಳಿಕೊಡುವಾಗ ಅಲ್ಲೊಂದ್ ಇಲ್ಲೊಂದ್ ದಿನಗಳಲ್ಲಿ ಅವರಿಗೆ ಕೆಲಸಕ್ಕೆ ಬರೋ ಕೆಲವು ವಿಚಾರ ಚರ್ಚೆಗೆ ಬರುತ್ತವೆ.ಅವರು ಒಳ್ಳೆಯ ಮೂಡಲ್ಲಿದ್ದು ಆಸಕ್ತರಾಗಿ ಕೇಳುವಾಗ ಒಳ್ಳೆಯ ಉದಾಹರಣೆ, ಅನುಭವಗಳೂ ಹತ್ತಾರು ವಿಷಯಗಳೂ ಹಂಚಿಕೊಳ್ಳುವುದೂ ಉಂಟು. ಒಳ್ಳೆಯ ಮೂಡ್ನಲ್ಲಿ ಇದ್ದಾಗ ಮಕ್ಕಳಿಗೆ ತಿಳಿಹಾಸ್ಯದ ಚಟಾಕೆಯನ್ನೂ ಹಂಚಿಕೊಳ್ಳುವ ಪ್ರಮೇಯ ಬಂದಿದೆ. ವಾರಾಂತ್ಯದಲ್ಲಿ ಮಾತ್ರ ನಡೆಯುವ ನಮ್ಮ ಶಾಲೆಯ ಮಕ್ಕಳು ಒಮ್ಮೊಮ್ಮೆ ಕೊಟ್ಟ ಮನೆಕೆಲಸ ಮಾಡದೇ ಬರುವುದು,ನಂತರ ಅವರು ತರಗತಿಯಲ್ಲಿ ಕುಳಿತು ತಿಣುಕುವಾಗ ನಮಗೆ ಅರ್ಥವಾಗುತ್ತದೆ ಅವರ ಕಷ್ಟ.

ಅವರು ಹೋಮ್ ವರ್ಕ್ ಮಾಡದಿದ್ದಕ್ಕೆ ಕೊಡುವ ಕಾರಣಕ್ಕೆ ನಮ್ಮಲ್ಲಿ ಉತ್ತರವೇ ಇರುವುದಿಲ್ಲ. ಹೀಗಿದ್ದಾಗ ಉಪಾಯ ಮಾಡಿ ಆಗಿಂದಾಗ್ಗೆ ಒಂದು ಪುಟ್ಟ ಚಟುವಟಿಕೆ ನಡೆಸಲಾಗುವುದು. ಇದನ್ನು ಪೋಷಕರು ವರ್ಷಕ್ಕೊಮ್ಮೆ ನಮ್ಮನ್ನು ಭೇಟಿಮಾಡಲು ಬಂದಾಗಲೂ ಅವರ ಮೇಲೂ ಪ್ರಯತ್ನ ಮಾಡಿರುವುದು ಉಂಟು. ಆ ಚಟುವಟಿಕೆ ಕಷ್ಟದ್ದೇನಿಲ್ಲ, ಬಹಳ ಸುಲಭವಾದದ್ದೇ.

ಅವರಿಗೆ ದೊಡ್ಡ ಗೋಡೆ ಗಡಿಯಾರದ ಸೆಕೆಂಡ್ ಮುಳ್ಳನ್ನು ಕಣ್ಣು ಮಿಟುಕಿಸದೆ ಒಂದು ನಿಮಿಷ ನೋಡುಲು ಹೇಳುವುದು. ಅವರು ಗಡಿಯಾರ ನೋಡುವಾಗ ನಾವು ಅವರನ್ನು ನೋಡುವುದೇ ಒಂದು ಮಜ. ೩೫,೩೬,೩೭ ಅಯ್ಯೋ ಇದೇನು ಒಂದು ನಿಮಿಷ ಮುಗಿತಾನೆ ಇಲ್ಲವೇ, ಕೆಲವರಿಗೆ ಕಣ್ಣಲ್ಲಿ ನೀರು,ಹುಶ್ಶಪ್ಪಾ,ಸಾಕಾಯ್ತು..... ಇನ್ನೂ ಏನೇನೋ ಕೇಳಿಬರುತ್ತದೆ. ಆ ಸಮಯದಲ್ಲಿ ಮತ್ತೊಬ್ಬರು ಬೋರ್ಡಿನ ಮೇಲೆ ಸಾಧ್ಯವಾದಷ್ಟು ಸಂಖ್ಯೆ ಒಂದನ್ನು ಗೀಚುತ್ತಿರುವುದು. ಅಬ್ಬಾ ಮುಗಿತು, ಏನು ಈ ಆಟದ ಫಲಿತಾಂಶ ಎಂದು ಅವರ ತಲೆಯಲ್ಲಿ ಅನ್ನಿಸುತ್ತಿರುವಾಗ. "ನೋಡಿದ್ರಾ ಒಂದು ನಿಮಿಷ ಕಳೆಯೋದು ಎಷ್ಟು ಹೊತ್ತು ಹಿಡಿಯುತ್ತೆ?" ಅಂತ ಹೇಳಿ. ಗೀಚಿದ ಗೆರೆಗಳ ಸಂಖ್ಯೆ ತೋರಿಸಿದಾಗ ಅವರ ಕಣ್ಣರಳುತ್ತದೆ, ಹಾಗಾದರೆ ಒಂದು ನಿಮಿಷದಲ್ಲಿ ಎಷ್ಟು ಪದ ಓದಬಹುದು, ಬರೆಯಬಹುದು, ಎಷ್ಟು ಹೆಜ್ಜೆ ಹಾಕಬಹುದು? ಎಂದೆಲ್ಲಾ ಹೇಳಿದಾಗ ಹುಬ್ಬೇರುತ್ತದೆ. "ಒಂದು ನಿಮಿಷ ಅರೆ! ಅರವತ್ತು ಸೆಕೆಂಡು? ಎಷ್ಟು ಸಮಯ?" ಎಂದವರು ಗುನುಗುತ್ತಿರಲು ಕೂಡಲೇ ಅವರಿಗೆ ಹೀಗೊಂದು ಪ್ರಶ್ನೆ ಎಸೆದಾಗ ತಲೆಯಾಡಿಸದೆ ಇರುವುದಿಲ್ಲ. ಮಕ್ಕಳು ಶಾಲೆ ಮುಗಿಸಿ ಸಾಮಾನ್ಯವಾಗಿ ಮನೆಗೆ ಬರುವುದು ಸಂಜೆ ೪ಕ್ಕೆ. ಮಲಗುವುದು ರಾತ್ರಿ ಹತ್ತಕ್ಕೆ.ಅಲ್ಲಿಗೆ ಒಟ್ಟು ಆರು ಘಂಟೆ, ಅದರಲ್ಲಿ ಒಟ್ಟು ಎಷ್ಟು ನಿಮಿಷ ಇದೆ ೩೬೦ !! ಅದರಲ್ಲಿ ಊಟ, ಆಟ, ಪಾಠ, ಟಿವಿ ಎಲ್ಲಾ ಕಳೆದರೂ ಇನ್ನೂ ಎರಡು ಘಂಟೆ ಉಳಿದಿದೆ ಅರೆ! ಹಾಗಾದರೆ ಎಷ್ಟು ಸಮಯ ನಾವು ವ್ಯರ್ಥ ಮಾಡಿದ್ದೇವೆ ಈ ವರೆಗೆ ? ಎಂಬ ಆಶ್ಚರ್ಯ ಆತಂತ ಅವರ ಮುಖದಲ್ಲಿ ಎದ್ದು ಸೋತು ಗೆದ್ದವರಂತೆ ಮುಗುಳ್ನಗೆ ಕಾಣುತ್ತದೆ. ದಿನಕ್ಕೆ ಎಷ್ಟು ಸಮಯ ನಾನ್ ಸೆನ್ಸ್ ನಲ್ಲೇ ಕಳೆಯಿತಲ್ಲ. "ಮಿಂಚಿಹೋದ ಕಾಲಕ್ಕೆ ಚಿಂತಿಸಿ ಫಲವಿಲ್ಲ" ಎಂದು ಕನವರಿಸುತ್ತಾ "ಟೈಮ್ ಈಸ್ ಮನಿ" ಎಂದು ತಿಳಿದು ಮುಂದೆ ಎಲ್ಲರೂ ಸಮಯದ ಸದುಪಯೋಗ ಮಾಡಿಕೊಳ್ಳುವರೆಂಬ ಆಶೆಯಿಂದ ಈ ಪುಟ್ಟ ಲೇಖನ ತಮಗೆ ಅರ್ಪಣೆ. ಉಪಯೋಗ ಅನ್ನಿಸಿದಲ್ಲಿ ಹಂಚಿಕೊಳ್ಳಿ. ಇದಾದ ನಂತರ ಮಕ್ಕಳಲ್ಲಿ ಬದಲಾವಣೆ ಕಂಡದ್ದು ಖಂಡಿತ. ▪

ನಿಂಬೆಕಾಯಿ ಸಾರು

ಬೇಕಾಗುವ ಸಾಮಗ್ರಿಗಳು

- ಮೂರು ನಿಂಬೆಹಣ್ಣು, ಒಂದು ಬಟ್ಟಲು ತೊಗರಿಬೇಳೆ, ಎರಡು ಮಾಗಿದ ಟೊಮಾಟೋ ಹಣ್ಣು
- ಎರಡು ಹಸಿ ಮೆಣಸಿನ ಕಾಯಿ, ಮೂರು ಕೆಂಪು ಮೆಣಸಿನ ಕಾಯಿ
- ಕಡ್ಲೇ ಬೇಳೆ ಕೊತ್ತಂಬರಿ ಬೀಜ ತಲಾ ಒಂದು ಚಮಚ
- ಜೀರಿಗೆ,ಮೆಣಸು,ಅರಿಶಿನ,ಸಾಸಿವೆ ತಲಾ ಅರ್ಧ ಚಮಚ
- ಒಗ್ಗರಣೆಗೆ ಚಿಟಿಕೆ ಇಂಗು, ಎಣ್ಣೆ, ಕರಿಬೇವು, ರುಚಿಗೆ ತಕ್ಕಷ್ಟು ಉಪ್ಪು

ಮಾಡುವ ವಿಧಾನ

- ಬೇಳೆಯನ್ನು ಅರಿಶಿನ ಬೆರೆಸಿ ಬೇಯಿಸಿ ಚೆನ್ನಾಗಿ ತಿರುವಿ ಇಡಿ
- ಹುರಿದ ಒಣ ಮೆಣಸಿನ ಕಾಯಿ, ಕೊತ್ತಂಬರಿ ಬೀಜ, ಕಡ್ಲೇಬೇಳೆ, ಮೆಣಸು, ಜೀರಿಗೆ, ಇಂಗು ಎಲ್ಲಾ ಒಣಗಿಸಿ ಕುಟ್ಟಿ ಅಥವಾ ಮಿಕ್ಸಿಯಲ್ಲಿ ಪುಡಿ ಮಾಡಿಕೊಳ್ಳಿ
- ಎರಡು ಬಟ್ಟಲು ನೀರು ಕುದಿಸಿ ಅರಿಶಿನ ಹೆಚ್ಚಿದ ಟೊಮಾಟೋ,ಕತ್ತರಿಸಿದ ಹಸಿ ಮೆಣಸಿನ ಕಾಯಿ ಉಪ್ಪು ಹಾಕಿ ಬೇಯಿಸಿ
- ನೀರು ಕುದಿಯುವಾಗ ಬೇಳೆ ಬೆರೆಸಿ ಎರಡು ಬಾರಿ ತಿರುವಿ ರುಬ್ಬಿದ ಪುಡಿ ಬೆರೆಸಿ ಕುದಿಸಿ
- ನಿಂಬೆ ರಸವನ್ನು ಬೆರೆಸಿದ ನಂತರ ಸಾಸಿವೆ ಕರಿಬೇವು ಒಗ್ಗರಣೆ ಹಾಕಿ ಒಲೆಯಿಂದಿಳಿಸಿ

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ರೆಸಿಪಿ ಕೊಡ್ತೀರಾ!

ಶ್ರೀಮಂತ - ಹೇಮಂತ

ಅಚ್ಚರಿಯ ಮೂಡಿಸುವ ಅತಿ ಚೆಲುವ ಹೇಮಂತ,

ವಸ್ತ್ರ ಕಳಚಿರಲೇನು ಚೆಲುವಲತಿ ಶ್ರೀಮಂತ.

ಮೈಕೊರೆವ ಶೀತಲಕು ಬೆತ್ತಲಾಗೇ ಬಿಡುತ,

ಎದೆಯೊಡ್ಡಿ ನಿಲ್ಲುವ ದಿಗಂಬರನೀ ಧೀಮಂತ

ಕಳಚಿ ಬೀಳಲಿ ಮನದ ಕೊಳೆತ ಭಾವಗಳೆಲ್ಲ,

ಮಣ್ಣೊಳಗೆ ಗೊಬ್ಬರದ ಹುಡಿಯಾಗಲಿ.

ಬೆತ್ತಲಾದರು ಚಿಂತೆ ಮಾಡದಿರು ನೀ ಮತ್ತೆ

ಸೋಗ ಸೊಗಸಿನ ವಸ್ತ್ರ ಮೂಡದಿರಲಿ

■ ನಾಗಶ್ರೀ ಕುಮಾರ್

ಕಾವ್ಯ ಚಿಲುಮೆ

ಒಗಟು

೧. ಚೆಲ್ಲೋದುಂಟು , ಕುಯ್ಯೋದುಂಟು , ತಿನ್ನೋದಿಲ್ಲ

೨. ಸುತ್ತಮುತ್ತ ಗರಿಕೆ , ನಡುವೆ ಕುಡಿಕೆ

ಉತ್ತರಕ್ಕೆ ಪುಟ ೧೨ ನೋಡಿ

ಗೆ ...

ಏನು ಮಾಡಲಿ ಹರಿಯೆ
ಏನ ಮಾಡಲಿ ದೊರೆಯೆ

ಮನ ಹತ್ತಿ ಉರಿದರೆ
ಜನ ಅತ್ತ ಸರಿದರೆ

ಮೊಗ್ಗು ತಾನಿರಿದರೆ
ಹಗ್ಗ ಹಾವಾದರೆ

ಬಾವಿ ಬರಿದಾದರೆ
ಬುವಿ ಬಾಯ್ತೆರೆದರೆ

ಸತಿ ಮಾತನೊಪ್ಪದಿರೆ
ಶೃತಿ ಜಾಡ ತಪ್ಪಿದರೆ

ಅನ್ನ ವಿಷವಾದರೆ
ಕಣ್ಣು ಕಿಸಿರಾದರೆ

ಹಿಡಿವ ಕೈ ಕಡಿದರೆ
ಬಡಿವ ಎದೆಯೊಡೆದರೆ

ಕಣ್ಣ ನೀರಿಳಿದರೆ
ನಿನ್ನ ನೆನಪಳಿದರೆ

ಏನು ಮಾಡಲಿ ಹರಿಯೆ
ಏನ ಮಾಡಲಿ ದೊರೆಯೆ

-ಮಾಲು, ಅಡಿಲೈಡ್

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ
ಇವರ "ಚಕ್ಕೆ ಮೊಗ್ಗು"

ಸುದರ್ಶನ್. ಏನ್
ಇವರ "ಅನಿವಾಸಿ"


ಬದರಿ ತ್ಯಾಮಗೊಂಡ್ಲು
ಇವರ "ಕಾವ್ಯ ಕಸ್ತೂರಿ"

ಸ್ಮಿತಾ ಮೇಲ್ಕೋಟೆ
ಇವರ "ಮಂದಹಾಸ"

ಮಹಾಂತೇಶ್ ಸಿ.
ಇವರ "ಹಂಗ ಸುಮ್ನ್..."

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: horanadachilume@gmail.com

SRI KRISHNA TRAVEL
Travel with a Smile
Contact Mr Sudheendra Rao EMAIL
Mobile 0415 291 723

choice HOME LOANS
Contact Mr.Sathya Bhat EMAIL
Mobile 0412 918 511

Umesh Nagasandra FT
ABN 55 405 83 51 32
Umesh Nagasandra
Mob: 0401 034 456
Email: umesh61@gmail.com
Web: www.arman.com.au
P.O. Box # 4127, Tranmere North, South Australia-5073, Australia.
Contact Mr Umesh EMAIL
Mobile 0401 034 456

AUSTINDIA SANGAM TRANSPORT
Contact Mr Eranna Gotyal EMAIL
Mobile 0404 215 605

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

೧. ದಾವಣಗೆರೆ ಬಳಿಯ ಈ ಊರಿನಲ್ಲಿ ಶಿವ ವಿಷ್ಣು ಒಂದಾಗಿದ್ದಾರೆ.

೨. ಎದುರಾಳಿಗೆ ಗೆಲುವು ದೊರೆತಾಗ ನಮಗಾಗುವುದು?

೩. ಜನರೆಲ್ಲ ಒಟ್ಟಾಗಿ ಸೇರಿ ದೇವರನ್ನು ಪ್ರಾರ್ಥಿಸುವ ಒಂದು ವಿಧಾನ.

೪. ಸುಖ ದುಃಖ ಹೇಳಿಕೊಳ್ಳಲು ಸರಿಯಾದವನಲ್ಲ ಇವನು!

೫. ಲಕ್ಷ್ಮಿಗೆ ಮನೆಯಾಗಿರುವ ವೆಂಕಟೇಶ್ವರ.

೬. ದವಸ ಧಾನ್ಯಗಳ ತುಂಬಿಡುವ ಗೂಡೇ ಕನ್ನಡ ಶಬ್ದಕೋಶವಾಗಿದೆ.

ಉತ್ತರ: ಯಾವುದೇ ಒಡವೆಗಳನ್ನು ತೊಟ್ಟಿರದಿದ್ದರೂ ಸಹ, ಈಕೆ ಚೆಲುವೆಯೇ.

ನಿಮ್ಮ ಉತ್ತರ ಇಮೇಲ್ ಮಾಡಿ, (horanadachilume@gmail.com)

ಜುಲೈ ೧೫ ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಏಪ್ರಿಲ್-ಮೇ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಉತ್ತರಿಸಿದವರು

- ಪುಷ್ಪ ಚಂದ್ರಶೇಖರ್ , ಕೆಂಗೇರಿ ಉಪನಗರ
- ವತ್ಸಲಾ ದ್ವಾರಕನಾಥ್, ಬೆಂಗಳೂರು
- ಸುಮ ಅಶೋಕ್, ಸಿಡ್ನಿ
- ಗೀತಾ ಟಿ. ಆರ್.
- ರಾಘವೇಂದ್ರ ಮೂರ್ತಿ, ಬೆಂಗಳೂರು

೧. ಕಾಡಿನಲ್ಲಿ ಹಲಸು, ಜೇನಿನ ರಸಾಯನ ಮಾಡುವ ಪ್ರವೀಣ ಪ್ರಾಣಿ.

ಕ	ರ	ಡಿ

೨. ನಾಯಕನ ಆಯ್ಕೆಗೆ ಎಲ್ಲರಿಂದಲೂ ಬೇಕಾದ ಒಪ್ಪಿಗೆ.

ಸ	ರ್ವಾ	ನು	ಮ	ತ

೩. ಊಟ ಬಡಿಸಲು ಶ್ರೇಷ್ಠವಾದ ಬಾಳೆಲೆಯ ಮುಂಭಾಗ.

ಅ	ಗ್ರ

೪. ಹುಣ್ಣಿಮೆಯ ದಿನ ಹುಟ್ಟಿದ್ದಕ್ಕೆ ಆ ಹುಡುಗಿಗೆ ಇಟ್ಟ ಹೆಸರು.

ಪೂ	ರ್ಣಿ	ಮ

೫. ಅಂಬರದಿಂದ ತಂದುದೇನು, ನಾರಾಯಣನು ಧರಿಸಿದ ನಾಜೂಕಿನ ವಸ್ತ್ರ.

ಪೀ	ತಾಂ	ಬ	ರ

೬. ಕಾಡಿನಿಂದ ಆರಿಸಿ ತಂದ ಸಮಿತ್ತುಗಳಿಂದ ನಡೆಸಿದ ಅಗ್ನಿಕಾರ್ಯ.

ಹ	ವ	ನ

ಉತ್ತರ: ಮೂಡಣ ದಿಕ್ಕಿಗಿರುವ ಆಕಾಶಕಾಯದಿಂದ
ಭಾದಿತನಾದವನು ಎಂದೇನಲ್ಲ, ಈ ಪದಪುಂಜದ ಅರ್ಥ.

ಪೂ	ರ್ವಾ	ಗ್ರ	ಹ	ಪೀ	ಡಿ	ತ

ಜಾಣ ಕರ್ನಾಟಕ

೧. ಕೊಡಗಿನ ಅರಸನೊಬ್ಬನ ಕುರಿತಾದ ಕಥೆಗೆ ಜ್ಞಾನಪೀಠ ಪ್ರಶಸ್ತಿ ಬಂದಿದೆ. ಆ ಕಥೆ ಯಾವುದು ಹಾಗೂ ಪ್ರಶಸ್ತಿ ಪಡೆದ ಸಾಹಿತಿ ಯಾರು?.

೨. ಭಾರತದ ಭಾಷೆಗಳಲ್ಲಿ ಇದುವರೆವಿಗೂ ಅತಿ ಹೆಚ್ಚು ಜ್ಞಾನಪೀಠ ಪ್ರಶಸ್ತಿ ಪಡೆದಿರುವ ಮೊದಲ ಎರಡು ಭಾಷೆಗಳು ಯಾವುವು?

ಸರಿ ಉತ್ತರಕ್ಕೆ ಪುಟ ೧೫ ನೋಡಿ

ಒಗಟು - ಉತ್ತರ

೧.ಕೂದಲು ೨. ಕಣ್ಣು

ಹಾಸ್ಯ ಚಿಲುಮೆ

ದೇವರು: ಭಕ್ತಾ ಏಳು ನಿನ್ನ ತಪಸ್ಸಿಗೆ ಮೆಚ್ಚಿದ್ದೇನೆ,ಎರಡು ವರವನ್ನು ಕೇಳು

ಭಕ್ತ: ಮೊದಲನೆಯದು ನನಗೆ ನಿದ್ದೆಯಲ್ಲೆ ಸಾವು ಬರಬೇಕು.

ದೇವರು: ತಥಾಸ್ತು ಸರಿ ಎರಡನೆಯದು?

ಭಕ್ತ: ಎರಡನೆಯದು ನನಗೆ ಎಂದಿಗೂ ನಿದ್ದೇನೇ ಬರಕೂಡದು.

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪

ರಚನೆ: ಲತಾ ಹೇಮಂತ್

ಯೋಗ, ಧ್ಯಾನ, ಮುದ್ರೆ, ಪ್ರಾಣಾಯಾಮ, ಅನುಷ್ಠಾನ ಹಾಗೂ ವ್ರತಾಚರಣೆಗಳನ್ನು ಕುರಿತಂತೆ ದಾಸಸಾಹಿತ್ಯದಲ್ಲಿರುವ ವಿವರಗಳ ಬಗ್ಗೆ ಸಂಶೋಧನೆಯಾಗಬೇಕಿದೆ. ಆದ್ಯರೆಂದು ಕರೆಯುವ ಪ್ರಾಚೀನ ಹರಿದಾಸರು, ಅಚಲಾನಂದದಾಸರು, ನರಹರಿತೀರ್ಥರು, ಇವರಿಂದ ರಚಿತವಾದ ದಾಸಸಾಹಿತ್ಯದ ಬಗ್ಗೆ ನಿರ್ದಿಷ್ಟವಾದ ಸಂಶೋಧನೆಯಾಗಬೇಕಾಗಿದೆ.

ದಾಸಸಾಹಿತ್ಯದಲ್ಲಿ ಕ್ಷೇತ್ರಕಾರ್ಯದ ಪಿತಾಮಹ ಎಂಬ ಗೌರವಕ್ಕೆ ಭಾಜನರಾದವರು ಬೇಲೂರು ಕೇಶವದಾಸರು. ಇವರು ಸಮಗ್ರ ಕರ್ನಾಟಕದ ಯಾತ್ರೆ ಮಾಡಿ ಹರಿದಾಸರ ಜೀವನದ ವಿವರಗಳನ್ನೆಲ್ಲಾ ಸಂಗ್ರಹಿಸಿ, ಕಣ್ಣಿಗೆ ಕಾಣುವಂತೆ ಅವನ್ನು ಬರೆದು ತೋರಿಸಿದರು. ತಮ್ಮ 'ಕರ್ನಾಟಕ ಭಕ್ತವಿಜಯ'ದಲ್ಲಿ.

ಇದೇ ಪರಂಪರೆಯಲ್ಲಿ ಗುರುಗೋವಿಂದ ವಿಠಲಂಕಿತರಾದ ಎಂ.ಆರ್. ಗೋವಿಂದರಾಯರು ಹರಿದಾಸರುಗಳು ಹುಟ್ಟಿ ಬೆಳೆದು ಓಡಾಡಿದ ಸ್ಥಳಗಳಿಗೆ ಹೋಗಿ, ಅಲ್ಲಿ ಆಯಾ ದಾಸರ ವಿಚಾರಗಳನ್ನು ಸಂಗ್ರಹಿಸಿ, 'ಹರಿಭಕ್ತವಿಜಯ' ಎಂಬ ಹೆಸರಿನಲ್ಲಿ ಏಳು ಸಂಪುಟಗಳನ್ನು ಪ್ರಕಟಿಸಿದರು. ಸಂಶೋಧನೆ ಮಾಡುವವರು ಈ ದಾರಿಯಲ್ಲಿ ಕ್ಷೇತ್ರಪರ್ಯಟನ ಕಾರ್ಯ ಮಾಡಿದಾಗಲೇ ಬಹಳಷ್ಟು ವಿವರಗಳು ಲಭ್ಯವಾಗಿ ಸಂಶೋಧನೆ ಅಧಿಕೃತ ಹಾಗೂ ನಿಖರವಾಗಬಲ್ಲದು.

ಸಂಶೋಧನೆ ಆಗಬೇಕಾದ ಇನ್ನೊಂದು ಆಯಾಮವೆಂದರೆ ಆಳ್ವಾರರ ಭಕ್ತಿಸಾಹಿತ್ಯ, ಅಭಂಗಗಳು ಹಾಗು ಉಗಾಭೋಗಗಳು, ಮೀರಾಬಾಯಿ, ಸೂರದಾಸರು, ಕಬೀರದಾಸರು, ಮುಂತಾದವರ ಸಾಹಿತ್ಯದೊಡನೆ ದಾಸಸಾಹಿತ್ಯದ ತೌಲನಿಕ ಅಧ್ಯಯನ ದೊಡ್ಡ ಪ್ರಮಾಣದಲ್ಲಿ ಆಗಬೇಕಾಗಿದೆ. ಹಾಗೆಯೇ ದಾಸಸಾಹಿತ್ಯದಲ್ಲಿ ಜಾನಪದದ ಅಂಶದ ಬಗ್ಗೆಯೂ ವಿಸ್ತೃತವಾದ ಅಧ್ಯಯನವಾಗಬೇಕಾಗಿದೆ.

ಹಾಗೆಯೇ ಹರಿದಾಸರ ಕಟ್ಟೆಗಳ ಬಗ್ಗೆ, ಹರಿದಾಸರು ಉಪಯೋಗಿಸುತ್ತಿದ್ದ ತಾಳ, ತಂಬೂರಿ, ಗೋಪಾಳಬುಟ್ಟಿಯ ಹಾಗೂ ಅವರ ಮನೆತನದಲ್ಲಿ ಉಳಿದು ಬಂದ ದಾಸರ ಪದಾರ್ಥಗಳ ಬಗ್ಗೆ ವಿಶೇಷ ಸಂಶೋಧನೆಯಾಗಬೇಕು.

ಈಗ್ಗೆ ಮೂರು ದಶಕಗಳ ಹಿಂದಿನ ಮಾತು, ನಾನು ಕೊರಟೆ ಶ್ರೀನಿವಾಸರಾಯರು, ಆದ್ಯರಾಮಾಚಾರ್ಯರು ಹರಿದಾಸಯಾತ್ರೆ ಕೈಗೊಂಡೆವು. ಅನೇಕ ಹರಿದಾಸರು ಹುಟ್ಟಿ ಬೆಳೆದು ಓಡಾಡಿದ ಸ್ಥಳಗಳನ್ನು ಸಂದರ್ಶಿಸಿದೆವು. ಬಾಗಲಕೋಟೆಗೆ ಬಂದೆವು. ಅಲ್ಲಿ ಪ್ರಸನ್ನವೆಂಕಟದಾಸರ ಮನೆಗೆ ಹೋದೆವು. ಅವರ ತಂಬೂರಿ, ಚಿಟಕಿ, ಗೋಪಾಲಬುಟ್ಟಿ, ಪೂಜಾ ವಿಗ್ರಹಗಳು ಎಲ್ಲಾ ನೋಡಿದೆವು. ಅಲ್ಲಿಂದ ಬಾದಾಮಿಗೆ ಬಂದೆವು. ಬಾದಾಮಿಯಲ್ಲಿ ಪ್ರಸನ್ನವೆಂಕಟ ದಾಸರು ತಮ್ಮ ಜೀವಿತದ ಕಡೆಯ ದಿನಗಳನ್ನು ಕಳೆದ, ನಿರ್ಯಾಣವಾದ ಸ್ಥಳದಲ್ಲಿ ಕುರಿಕೋಳಿಗಳ ದೊಡ್ಡಿಯಿತ್ತು. ಅಹಿಂಸೆಯ ವ್ಯವಹಾರಗಳು ಅಲ್ಲಿ ನಡೆಯುತ್ತಿದ್ದುದ್ದನ್ನು ಕಂಡು, ನೊಂದು ಬೆಂಗಳೂರಿಗೆ ಬಂದೊಡನೆಯೇ ಆಗ ಭಾರತದ ಪ್ರಾಚ್ಯವಸ್ತು ಸಂಶೋಧನಾ ಉನ್ನತಾಧಿಕಾರಿಗಳಾಗಿದ್ದ ಡಾ.ಎಸ್.ಆರ್.ರಾವ್ ಅವರ ಗಮನಕ್ಕೆ ಇದನ್ನು ತಂದು, ಆ ಜಾಗವನ್ನು ಪವಿತ್ರ ಜಾಗವೆಂದು ಘೋಷಿಸಿ ಎಂದು ಪ್ರಾರ್ಥಿಸಿದೆವು.

ಮುಂದಿನ ಪುಟ ನೋಡಿ ...

ಯೋಗಾಯೋಗವೆನ್ನುವಂತೆ ಆಗ ಪ್ರಾಚ್ಯವಸ್ತು ಇಲಾಖೆಯ ಕೆಲಸಗಳು ಬಾದಾಮಿ ಐಹೊಳೆಯಲ್ಲಿ ನಡೆಯುತ್ತಿದ್ದು ಡಾ. ಎಸ್.ಆರ್. ರಾವ್ ಅವರು ಕೂಡಲೇ ಆ ಜಾಗವನ್ನು ತೆರವುಗೊಳಿಸಿ, ಅಲ್ಲಿ ಪ್ರಸನ್ನವೆಂಕಟದಾಸರು ನಿರ್ಯಾಣವಾದ ಸ್ಥಳ, ಇದು ಸುರಕ್ಷಿತ ಪ್ರದೇಶವೆಂದು ಘೋಷಿಸಿ ಅಲ್ಲಿ ಫಲಕಹಾಕಿದರು. ಆಗಿನಿಂದಲೂ ಪ್ರಸನ್ನವೆಂಕಟದಾಸರ ಬೆಳದಿಂಗಳ ಭಾಷೆಯಂತಹ ಅಪೂರ್ವ ಸಾಹಿತ್ಯದ ಬಗ್ಗೆ ಹುಚ್ಚು ಹಚ್ಚಿಕೊಂಡು, ಹೆಚ್ಚಿಸಿಕೊಂಡ, ನನಗೆ ಅವರ ಸಾಹಿತ್ಯ ಓದುತ್ತಾ ಹೋದಂತೆಲ್ಲಾ, ಅವರ ಹಾಡುಗಳು ಇನ್ನೂ ಅಪಾರವಾಗಿವೆ. ಈಗ ಲಭ್ಯವಾಗಿರುವುದು ತುಂಬಾ ಕಡಿಮೆ. ಅದರ ಶೋಧನೆಗಾಗಿ ಕೆಲಸ ಆಗಬೇಕಿದೆ ಎಂದು ನಂಬಿಕೆ ಬಂದು ಅನೇಕ ಕಡೆ ಹೇಳುತ್ತಾ ಹೋದೆ.

ಮುಂದೆ ರಾಷ್ಟ್ರದ ಶ್ರೇಷ್ಠ ವಿಜ್ಞಾನಿಗಳಲ್ಲೊಬ್ಬರಾದ ಡಾ. ಸುಭಾಷ್ ಕಾಖಂಡಕಿ ಹಾಗೂ ಅವರ ಪತ್ನಿ ಹಾಗೂ ಪ್ರಖ್ಯಾತ ಸಾಹಿತಿಯೂ ಆದ ಶ್ರೀಮತಿ ರೇಖಾ ಕಾಖಂಡಕಿಯವರು ಶ್ರೀಪ್ರಸನ್ನವೆಂಕಟ ಕಲ್ಚರಲ್ ಅಂಡ್ ಚಾರಿಟಬಲ್ ಟ್ರಸ್ಟ್ ಪ್ರಾರಂಭಿಸಿ, ರೇಖಾ ಕಾಖಂಡಕಿಯವರು ರಚಿಸಿದ ದಾಸರನ್ನು ಕುರಿತ ಗ್ರಂಥದ ಬಿಡುಗಡೆಗಾಗಿ, ಬಾಲಗಲಕೋಟೆಗೆ ನನ್ನನ್ನು ಆಹ್ವಾನಿಸಿದರು. ಆ ಸಮಾರಂಭದಲ್ಲಿ ನಾನು ನನ್ನ ಈ ಅಭಿಪ್ರಾಯ ಹೇಳಿ ಪ್ರಸನ್ನವೆಂಕಟದಾಸರ ಇನ್ನೂ ಬಹಳಷ್ಟು ಹಾಡುಗಳು ನಮಗೆ ಸಿಕ್ಕಿಲ್ಲ, ಅವುಗಳನ್ನು ಅನ್ವೇಷಣೆ ಮಾಡುವ ಜವಾಬ್ದಾರಿ ನಮ್ಮದಿದೆ. ಈ ಭಾಗದ ಜನ ಆ ಕಾರ್ಯದಲ್ಲಿ ಮುಂದಾಗಬೇಕು. ಎಂಬುದಾಗಿ ವಿನಂತಿಸಿದೆ. ಮುಂದೆ ಡಾ.ಸುಭಾಷ್ ಕಾಖಂಡಕಿಯವರು ಇದನ್ನು ಗಂಭೀರವಾಗಿ ಪರಿಗಣಿಸಿದರು. ಅದರ ಫಲಶೃತಿಯಾಗಿ ಡಾ||ಕಾಖಂಡಕಿಯವರು ತಾವೇ ಸ್ವತಃ ಪರಿಶ್ರಮವಹಿಸಿ ಅನೇಕ ಅಪೂರ್ವ ಹಸ್ತಪ್ರತಿಗಳನ್ನು ಸಂಗ್ರಹಿಸಿದರು. ಇತ್ತೀಚೆಗೆ ಸಂಶೋಧಕ ಶ್ರೀಲಕ್ಷ್ಮೀಕಾಂತ್ ಪಾಟೀಲ್ ವಿಜಾಪುರ ಅವರು ಲಭ್ಯವಿದ್ದ ದಾಸರ ಅಪ್ರಕಟಿತ ಹಸ್ತಪ್ರತಿಗಳನ್ನು ಮಹಾರಾಷ್ಟ್ರದಲ್ಲಿ ಹುಡುಕಿ ತಂದಾಗ, ಆ ಹಸ್ತಪ್ರತಿಯ ಸಹಿತ, ಹಾಡುಗಳ ಪರಿಷ್ಕಾರ ಮಾಡಿ ಡಾ||ಸುಭಾಷ್ ಕಾಖಂಡಕಿಯವರು ತಮ್ಮ ಟ್ರಸ್ಟಿನಿಂದ ಸುಂದರವಾಗಿ ಪ್ರಕಟಿಸಿ ಕನ್ನಡಿಗರಿಗೆ ಬಹು ದೊಡ್ಡ ಉಪಕಾರಮಾಡಿದ್ದಾರೆ. ಪುರಂದರದಾಸರ ಅನೇಕ ಅಪ್ರಕಟಿತ ಹಾಡುಗಳನ್ನು ಈ ಸಂಶೋಧಕರು ಹುಡುಕಿ ಪಡೆದು ಪರಿಷ್ಕಾರ ಮಾಡುತ್ತಿದ್ದಾರೆ. ಎಂಬ ಸಂಗತಿಯೂ ಅತ್ಯಂತ ಸಂತೋಷ ತರುವಂತಹುದು ಹಾಗೂ ಅದಕ್ಕಾಗಿ ಅವರು ಅಭಿನಂದನೀಯರು.

ಹಸ್ತಪ್ರತಿಗಳನ್ನು ಪಡೆಯುವುದು ಅಷ್ಟು ಸುಲಭದ ಕಾರ್ಯವಲ್ಲ ಎನ್ನುವುದಕ್ಕೆ ಗೋರೇಬಾಳ ಹನುಮಂತರಾಯರ ಮಾತುಗಳೇ ಸಾಕ್ಷಿ.

ಕನ್ನಡ ಹರಿದಾಸರ ಉಗಮ ಮತ್ತು ಪುರಂದರದಾಸರ ಸುಳಾದಿಗಳು ಎಂಬ ಪುಸ್ತಕದಲ್ಲಿ ಗೋರೇಬಾಳ ಹನುಮಂತರಾಯರು ನರಹರಿತೀರ್ಥರ ನಾಲ್ಕುಪದಗಳನ್ನು ಹಿಂದೆ ನಾನು ಪ್ರಕಟಿಸಿರುತ್ತೇನಲ್ಲದೆ, ಇನ್ನೂ ಹದಿನೆಳು ಪದಗಳು ಒಬ್ಬ ದಕ್ಷಿಣ ಸೀಮೆಯ ಬ್ರಾಹ್ಮಣರಲ್ಲಿ ನಾನು ಕಣ್ತುಂಬಾ ನೋಡಿದ್ದೇನೆ. 200 ವರ್ಷದ ಹಳೆಯ ಆ ಕಾಗದ ಬರೆದುಕೊಳ್ಳಲು ಅವರು ಏನು ಮಾಡಿದರೂ ಕೊಡಲಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಹಾಗೆಯೇ ಅನೇಕ ವರ್ಷಗಳ ಕಾಲ ಗೋರೇಬಾಳ ಹನುಮಂತರಾಯರು ಚಿಪ್ಪಗಿರಿಗೆ ಹೋಗಿ, ವಿಜಯದಾಸರ ಹಸ್ತಪ್ರತಿಗಳ ದರ್ಶನ ಮಾಡಿಸಿ ಎಂದು ಪರ್ಯಾಯಸ್ತರಾಗಿದ್ದ ವೆಂಕೋಬದಾಸರಲ್ಲಿ ಪ್ರಾರ್ಥನೆ ಮಾಡುತ್ತಲೇ ಇದ್ದರು. ಆದರೆ ತಮಗೆ ಆ ಬಗ್ಗೆ ಸೂಚನೆ ಆಗಿಲ್ಲವೆಂದು ಹೇಳುತ್ತಲೇ ವೆಂಕೋಬದಾಸರು ಆ ಹಸ್ತಪ್ರತಿಗಳನ್ನು ತೋರಿಸಿರಲಿಲ್ಲ. ಹೀಗೆಯೇ ಅನೇಕ ವರ್ಷಗಳು ಕಳೆದವು. ಕಡೆಗೆ ವಾಯಿಕರ್ ಕೃಷ್ಣಾಚಾರ್ಯರು ಚಿಪ್ಪಗಿರಿಯಲ್ಲಿ ಜಪತಪಅನುಷ್ಠಾನದಲ್ಲಿ ನಿರತರಾಗಿದ್ದಾಗ, ಹರಿದಾಸರತ್ನಂ ಗೋಪಾಲದಾಸರೂ ಅಲ್ಲೇ ವಿಜಯದಾಸರ ಸೇವೆಮಾಡುತ್ತಿದ್ದಾಗ ಗೋರೇಬಾಳರಿಗೆ ವಿಜಯದಾಸರ ಹಾಡುಗಳ, ಸುಳಾದಿಗಳ ಹಸ್ತಪ್ರತಿಗಳ ದರ್ಶನ ಭಾಗ್ಯ ಲಭಿಸಿತು.

ಮುಂದಿನ ಸಂಚಿಕೆಯಲ್ಲಿ ಮುಂದುವರೆಯುವುದು

ನೀವು ಮಾಡಿ

ರಾಕೆಟ್ ಸೈನ್ಸ್

ಸಂಕಲನ: ಬದರಿ ತ್ಯಾಮಗೊಂಡ್ಲು

ಬೇಕಾಗುವ ಸಾಮಗ್ರಿ

- ಉದ್ದಕ್ಕೆ ಉದಬಹುದಾದ ಬಲೂನ್
- ೧೦-೧೫ ಅಡಿ ಉದ್ದದಷ್ಟು ಟ್ವೈನ್ ದಾರ
- ಒಂದು ಪ್ಲಾಸ್ಟಿಕ್ ಸ್ಟ್ರಾ
- ಅಂಟಿಸಲು ಸೆಲ್ಲೋಟೇಪ್

ವಿಧಾನ

- ದಾರವನ್ನು ಸ್ಟ್ರಾ ಒಳಗೆ ತೂರಿಸಿ ಎರಡು ಚೇರ್ ಗಳ ನಡುವೆ ದಾರವನ್ನು ಕಟ್ಟಿ
- ಬಲೂನ್ ಅನ್ನು ಸಾಕಷ್ಟು ಉದಿ ಗಾಳಿ ಹೋಗದಂತೆ ಅದರ ತುದಿ ಹಿಡಿದುಕೊಂಡು ಸೆಲ್ಲೋ ಟೇಪ್ ಉಪಯೋಗಿಸಿ ಚಿತ್ರದಲ್ಲಿ ತೋರಿಸಿದಂತೆ ಸ್ಟ್ರಾ ಗೆ ಅಂಟಿಸಬೇಕು
- ಬಲೂನ್ ತುದಿ ಬಿಡುತ್ತಿದ್ದಂತೆ ರಭಸವಾಗಿ ಬಲೂನ್ ಮುಂದೆ ಚಲಿಸುತ್ತದೆ

ಏನಾಗುತ್ತಿದೆ

ಗಾಳಿಯು ಬಲೂನ್ ಒಳಗೆ ಒತ್ತಡದಿಂದ ಇರುತ್ತದೆ. ಬಲೂನ್ ತುದಿಯನ್ನು ಬಿಟ್ಟ ತಕ್ಷಣ ಇಡೀ ಗಾಳಿ ಒಮ್ಮೆಗೆ ಹೊರಬರಲು ಪ್ರಯತ್ನಿಸಿ ಮುಂಚಲನೆಯನ್ನು ಸೃಷ್ಟಿಸುತ್ತದೆ. ವಿಭಿನ್ನ ಗಾತ್ರದ ಮತ್ತು ಆಕಾರಗಳ ಬಲೂನ್ ಹೆಚ್ಚು ಅಥವಾ ಕಡಿಮೆ ಒತ್ತಡವನ್ನು ರಚಿಸುತ್ತದೆ. ನಿಜವಾದ ರಾಕೆಟ್ ನಲ್ಲಿ ಇಂಧನವನ್ನು ಉರಿಸಿ ಅದರಿಂದ ಒತ್ತಡ ಸೃಷ್ಟಿಸಿಲಾಗುತ್ತದೆ. ಈ ಒತ್ತಡವನ್ನು ಕೆಳಮುಖವಾಗಿ ಹೊರಹೋಗುವಂತೆ ರಚಿಸಿರುವುದರಿಂದ ರಾಕೆಟ್ ಮೇಲಕ್ಕೆ ಹೋಗುತ್ತದೆ. ▪

ಜಾಣ ಕರ್ನಾಟಕ – ಉತ್ತರ

೧. ಚಿಕ್ಕವೀರ ರಾಜೇಂದ್ರ. ಮಾಸ್ತಿ ವೆಂಕಟೇಶ ಅಯ್ಯಂಗಾರ್.

೨, ಮೊದಲು ಹಿಂದಿ ನಂತರ ಕನ್ನಡ. ರಾಜ್ಯಾವಾರು ಪರಿಗಣಿಸಿದರೆ, ಕರ್ನಾಟಕವೇ ಮೊದಲು.

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ಸಿಡ್ನಿ ಕನ್ನಡ ಶಾಲೆ ಆಶ್ರಯದಲ್ಲಿ

ಭಾವ - ಚಿತ್ರ - ಗಾನ

ಖ್ಯಾತ ಗಾಯಕಿ ರತ್ನಮಾಲಾ ಪ್ರಕಾಶ್

ಮತ್ತು ಪಂಚಮ್ ಹಳಿಬಂಡಿ

ಆಗಸ್ಟ್ ೨೫-೨೬

ವಿವರಗಳು ಸದ್ಯದಲ್ಲೇ

Ganeshothsava 2018
Whitlam Centre
Liverpool
Sept 15 8am-9pm
Sept 16 8am - 3pm

ಈ ಸಂಚಿಕೆಯನ್ನು ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.

ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.